ಅಸಲು ದಾವೆ ನಂಃ 94/2016 ಡಿ ಡಬ್ಲ್ಯೂಃ1- ಶಾಂತಪ್ಪ ವೀರಪ್ಪ ಅಕ್ಕಿ

ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 06/08/2024 ರಂದು ಪ್ರಮಾಣೀಕರಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ **BMS** ವಕೀಲರಿಂದಃ

**2.** 2015 ರಲ್ಲಿ ನಾನು ಪಂಚಾಯತಿ ಎಲೆಕ್ಸನ್ ಗೆ ನಿಂತು ಮೆಂಬರ್ ಆಗಿ ಆಯ್ಕೆಯಾಗಿದ್ದೆ ಎಂದರೆ ನಿಜ. ಮೆಂಬರ್ ಆದಾಗ ನನ್ನ ಅಡ್ಡ ಹೆಸರು ಗಡಾದ ಎಂದು ಬರೆಸಿದ್ದೆ. ನಮ್ಮ ಮನೆತನಕ್ಕೆ ಅಕ್ಕಿ ಮತ್ತು ಅಕ್ಕಿಶೆಟ್ಟರ ಎಂದು ಹಾಗೂ ಗಡಾದ ಎಂದು ಸಹ ಕರೆಯುತ್ತಾರೆ. ನಮ್ಮ ಅಜ್ಜ ಅಜ್ಜಿ ಕಾಲದಿಂದ ವ್ಯಾಪಾರಸ್ಥರ ಮನೆತನ ಎಂದರೆ ನಿಜ. ಸಾಕ್ಷಿ ಒಕ್ಕಲತನ ಸಹ ಮಾಡುತ್ತೇವೆ ಎಂದು ಹೇಳುತ್ತಾರೆ. ನಾನು ಮತ್ತು ನನ್ನ ಅಣ್ಣ ತಮ್ಮಂದಿರು ಬಾಯಿ ಮಾತಿನ ಮೂಲಕ ನಮ್ಮ ನಮ್ಮ ಹಿಸ್ಸೆ ತೆಗೆದುಕೊಂಡಿದ್ದೇವೆ. ಜಕ್ಕಲಿ ರೋಣ ರಸ್ತೆಯಲ್ಲಿ ಇರುವ ಅಂಗಡಿ ಮತ್ತು ಮನೆ ಎಲ್ಲರಿಗೂ ಬಂದಿದೆ. ನಮ್ಮ ಮನೆತನಕ್ಕೆ ಒಟ್ಟು 10 ಎಕರೆ ಜಮೀನು ಇದೆ. ನಮಗೆ BPL ಕಾರ್ಡ ಇದೆ.

3. ದಾವಾ ಆಸ್ತಿ ವಿ.ಪಿ.ಸಿ. 59/ಬಿ 1 ಖರೀದಿ ಮಾಡುವ ಮುಂಚೆ ಅದರ ನಕ್ಷೆ ಮಾಡಿಸಿಲ್ಲ. ನಾನು ಶ್ಯಾಮಸುಂದರ ಆದಿ ಇವರ ಹಿಸ್ಸಾ ಖರೀದಿ ಮಾಡುವ ಮುಂಚೆ ಅದು ಅವರಿಗೆ ಬಂದಿದೆಯೋ ಇಲ್ಲವೋ ಎಂದು ಖಾತ್ರಿ ಮಾಡದೇ ಖರೀದಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಇ ಸ್ವತ್ತನ್ನು ಮಾಡಿಸುವಾಗ ನನ್ನ ಮನೆಯ ಬಾಜು ಇದಿದ್ದರಿಂದನಾನು ಸಹ ಹಾಜರು ಇದ್ದೆ. ಶ್ಯಾಮಸುಂದರ ಆದಿ ಇವರಿಗೆ ಇ ಸ್ವತ್ತು ಆಗಿತ್ತು. ಆ ಇ ಸ್ವತ್ತನ್ನು ನೋಡಿ ನಾನು ಖರೀದಿ ಮಾಡಿದ್ದೇನೆ. ಅಳತೆ ಮಾಡುವಾಗ ಮಾಡಿದಂತಹ ನಕ್ಷೆಯನ್ನು ನ್ಯಾಯಾಲಯಕ್ಕೆ ಹಾಜರುಮಾಡಿಲ್ಲ. ನಾನು ದಾವಾ ಆಸ್ತಿ ಖರೀದಿ ಮಾಡುವಾಗ ವಾದಿಯ ಹಿಸ್ಸಾಗೆ ಬಂದಂತಹ ವಿ.ಪಿ.ಸಿ. 59 ಬಿ /2 ಆಸ್ತಿಯನ್ನು ತಪ್ಪಾಗಿ ಖರೀದಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಆಸ್ತಿಯನ್ನು ಖರೀದಿ ಮಾಡುವ ಸಮಯದಲ್ಲಿ ಜಕ್ಕಲಿ ಗ್ರಾಮ ಪಂಚಾಯತಿ ಮೆಂಬರ್ ಇದ್ದೆ, ಆ ಸಮಯದಲ್ಲಿ ನನ್ನ ಪ್ರಭಾವ ಬೀರಿ ಸದರಿ ಠಾರಾವನ್ನು ಮಾಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ಖರೀದಿಯ ಹೆಸರಿನಲ್ಲಿ ವಾದಿಯ ಆಸ್ತಿಯನ್ನು ಅತಿಕ್ರಮಣ ಮಾಡುವ ಪ್ರಯತ್ನ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು 3 ನೇ ಪ್ರತಿವಾದಿಯ ಆಸ್ತಿಯ ಖರೀದಿ ಮಾಡಬೇಕಾಗಿತ್ತು ಅದರ ಬದಲಾಗಿ ವಾದಿಯ ಆಸ್ತಿಯನ್ನು ಖರೀದಿ ಮಾಡಿದ್ದೇನೆ ಎಂದರೆ ಸರಿಯಲ್ಲ. ವಾದಿಯ ಆಸ್ತಿಯನ್ನು ಖರೀದಿ ಮಾಡಿಕೊಂಡು ಆತನಿಗೆ ವಿನಾಕಾರಣ ತೊಂದರೆ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ. ಖರೀದಿ ಮಾಡಿದ ನಂತರ ನಾನು ದಾಖಲೆಗಳನ್ನು ಪರಿಶೀಲನೆ ಮಾಡಿದಾಗ ನನಗೆ ಈಗ ಸದರಿ ಆಸ್ತಿ ವಾದಿಗೆ ಬಂದಿದೆ ಎಂದು ಗೊತ್ತಾಗಿದೆ ಎಂದರೆ ಸರಿಯಲ್ಲ. ನಾನು ಸುಳ್ಳು ಕೈಪಿಯತ್ತು ಮತ್ತು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಅದೆ.

**(ಆದಿತ್ಯ ಆರ್ ಕಲಾಲ್ )**

ಹೆಚ್ಚುವರಿ ಸಿವಿಲ್ ಹಾಗೂ ಜೆ .ಎಮ್ .ಎಫ್.ಸಿ

ನ್ಯಾಯಾಧೀಶರು ರೋಣ .